ಮಕ್ಕಳ ಹಕ್ಕುಗಳಿಗೆ ಬದ್ಧತೆ ಮತ್ತು ಮಕ್ಕಳ ಸಂರಕ್ಷಣೆಗೆ ಆಧ್ಯತೆ ನೀಡಿರುವ ನಮ್ಮ ಸಂಸ್ಥೆಯಲ್ಲಿನ/ ಶಾಲೆಯಲ್ಲಿನ/ ವಸತಿ ನಿಲಯದ ***ಎಲ್ಲಾ ಸಿಬ್ಬಂದಿ, ಶಿಕ್ಷಕರು, ಗುತ್ತಿಗೆ ಆಧಾರದ ಸಿಬ್ಬಂದಿ ಮತ್ತು ಸ್ವಯಂ ಸೇವಕರು ಎಲ್ಲರೂ ಮಕ್ಕಳ ಹಿತ ದೃಷ್ಠಿಯಿಂದ ಮಕ್ಕಳ ಸಂರಕ್ಷಣಾ ನೀತಿ/ನಿಯಮದ ಆಧಾರದಲ್ಲಿ ನಮ್ಮ ಬದ್ಧತೆಗಳು;***

1. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿನ ಯಾವುದೇ ಮಕ್ಕಳಿಗೆ ಯಾವುದೇ ರೀತಿಯ, ಯಾವುದೇ ಅಂಶ ಮತ್ತು ವಿಭಾಗಗಳಲ್ಲಿ ***ನಿರ್ಲಕ್ಷ್ಯ, ತಾರತಮ್ಯ ಮತ್ತು ಶೋಷಣೆ*** ಆಗದಂತೆ ನೋಡುತ್ತೇವೆ.
2. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿ ***ಯಾವುದೇ ಕಾರಣಕ್ಕೂ ಯಾವುದೇ ರೀತಿಯ ದೈಹಿಕ ಶಿಕ್ಷೆ, ಮಾನಸಿಕ ಹಿಂಸೆ, ಲೈಂಗಿಕ ಹಿಂಸೆ ಆಗದಂತೆ ಮತ್ತು ಮಾನಸಿಕ ಕ್ಷೋಭೆ ಉಂಟಾಗದಂತೆ ನೋಡಿಕೊಳ್ಳುತ್ತೇವೆ,*** ಹಾಗೂ ಇದಾವುದೇ ಉಲ್ಲಂಘನೆ ಆಗದಂತೆ ನೋಡಿಕೊಳ್ಳುವ ಹೊಣೆ ನಮ್ಮದಾಗಿದೆ.
3. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿ ಮಕ್ಕಳ ಸಂರಕ್ಷಣಾ ಸಮಿತಿ, ಮೀನಾ ಕ್ಲಬ್, ಮಕ್ಕಳ ಹಕ್ಕುಗಳ ಕ್ಲಬ್ ಮತ್ತು ಮಕ್ಕಳ ಸುರಕ್ಷತಾ ಸಮಿತಿ ರಚಿಸಿದ್ದು ತನ್ಮೂಲಕ ***ಮಕ್ಕಳ ಭಾಗವಹಿಸುವ ಹಕ್ಕನ್ನು ಎತ್ತಿ ಹಿಡಿಯಲಾಗಿದೆ ಹಾಗೂ ಮೇಲಿನ ಸಮಿತಿಗಳ ಕ್ರಿಯಾಶೀಲ ಅನುಷ್ಠಾನ ಮಾಡುತ್ತೇವೆ.***
4. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿ ಮಕ್ಕಳಿಗೆ ಆಯಾ ಪ್ರದೇಶ ವ್ಯಾಪ್ತಿಯಲ್ಲಿ ನಡೆಯುವ ***"ಮಕ್ಕಳ ಗ್ರಾಮ ಸಭೆ" ಯಲ್ಲಿ ಮಕ್ಕಳಿಗೆ ಭಾಗವಹಿಸಲು ಅವಕಾಶ ಮಾಡಿಕೊಡುತ್ತೇವೆ.*** ಹಾಗೂ ಎಲ್ಲಾ ಮಕ್ಕಳಿಗೂ ಅವರವರ ಅಭಿಪ್ರಾಯ, ಸಮಸ್ಯೆ ಮತ್ತು ದೂರುಗಳನ್ನು ಹೇಳಲು ಮತ್ತು ಹಂಚಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತೇವೆ.
5. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದ ವ್ಯಾಪ್ತಿಯಲ್ಲಿ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಕಿಶೋರ ಕಾರ್ಮಿಕ ಪದ್ಧತಿ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಹಲ್ಲೆ, ಕಾಣೆಯಾದ ಮಕ್ಕಳು, ಮಾರಾಟ ಮತ್ತು ಸಾಗಾಣಿಕೆಗೆ ಒಳಗಾದ ಮಕ್ಕಳು ಮತ್ತು ಯಾವುದೇ ರೀತಿಯ ತಾರತಮ್ಯ ಮತ್ತು ನಿರ್ಲಕ್ಷ್ಯಕ್ಕೆ ಒಳಗಾದ ***ಮಕ್ಕಳು ಹಾಗೂ ಶೋಷಣೆ ಮತ್ತು ದೌರ್ಜನ್ಯಕ್ಕೋಳಗಾದ ಮಕ್ಕಳು ಕಂಡಾಗ ಸಂಬಂದಿಸಿದ ಸೂಕ್ತ ಇಲಾಖೆ ಮತ್ತು ಅಧಿಕಾರಿಗಳಿಗೆ ದೂರು ನೀಡಿ ಮಕ್ಕಳ ಸಂರಕ್ಷಣೆಗೆ ಮುಂದಾಗುತ್ತೇವೆ/ನೆ.***
6. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿ ***'ಮಕ್ಕಳ ರಕ್ಷಣಾ ನೀತಿ'*** ಇರುವುದರಿಂದ ಮಕ್ಕಳಿಗೆ ಸಂಬಂದಿಸಿದ ಯಾವುದೇ ಸಮಸ್ಯೆಗೆ ಸ್ಪಂದಿಸಿ ತಕ್ಷಣ ಪ್ರತಿಕ್ರೀಯೆ ನೀಡಿ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ವ್ಯವಸ್ಥೆಗೆ ಸಹಕರಿಸುತ್ತೇವೆ/ನೆ. ***ತನ್ಮೂಲಕ ಮಕ್ಕಳ ಸಂರಕ್ಷಣೆಗೆ ಮುಂದಾಗುತ್ತೇವೆ.***
7. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿ ಯಾವುದೇ ಮಗು ಮತ್ತು ***ಮಗುವಿನ ಕುಟುಂಬದ ಘನತೆ, ಸ್ವಾಭಿಮಾನ ಮತ್ತು ಹಕ್ಕುಗಳಿಗೆ ಧಕ್ಕೆ ಯಾಗದಂತೆ ಕಾರ್ಯ ನಿರ್ವಹಿಸುತ್ತೇವೆ. ಎಲ್ಲಾ ಮಕ್ಕಳಿಗೆ ಅವರ ಹಕ್ಕುಗಳನ್ನು ಅನುಭವಿಸಲು ಸೂಕ್ತ ಬೆಂಬಲ ನೀಡುತ್ತೇನೆ.***
8. ನಮ್ಮ ಶಾಲೆ/ಸಂಸ್ಥೆ ಇರುವ ಗ್ರಾಮ/ವಾರ್ಡ್ ವ್ಯಾಪ್ತಿಯಲ್ಲಿ ***ಯಾವುದೇ ಮಗು ಶಾಲೆಯಿಂದ ಹೊರಗುಳಿದು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುತ್ತೇವೆ. ಅಂತಹ ಮಕ್ಕಳನ್ನು ಶಾಲೆಗೆ ಕರೆತರುವ/ಶಾಲೆಗೆ ಸೇರಿಸುವ ಜವಾಬ್ದಾರಿ ನಮ್ಮದು.***
9. ನಮ್ಮ ಶಾಲೆಯ ಶಿಕ್ಷಕ ಮತ್ತು ಸಿಬ್ಬಂದಿ ಸಮುದಾಯ/ನಮ್ಮ ಸಂಸ್ಥೆಯ ಪ್ರತಿ ಸಿಬ್ಬಂದಿ ***ಮಕ್ಕಳ ಹಕ್ಕುಗಳ ಒಡಂಬಡಿಕೆ ಹಾಗೂ ಮಕ್ಕಳ ರಕ್ಷಣೆಗಳಿಗಿರುವ ಕಾನೂನುಗಳ ಮಾಹಿತಿಯನ್ನು ಪಡೆದುಕೊಂಡಿದ್ದೇವೆ*** ಹಾಗೂ ಕಾಲಕಾಲಕ್ಕೆ ಈ ವಿಚಾರಗಳ ಬಗ್ಗೆ ನಮ್ಮ ಶಾಲೆ/ಸಂಸ್ಥೆಯಲ್ಲಿ ಚರ್ಚೆಯಾಗುವಂತೆ ನೋಡಿಕೊಳ್ಳುತ್ತೇವೆ.

10. ನಮ್ಮ ಶಾಲೆ/ಸಂಸ್ಥೆಯ ಹಿತದೃಷ್ಟಿಯಿಂದ ***ನಮ್ಮ ಗ್ರಾಮಪಂಚಾಯಿತಿ, ವಾರ್ಡ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ, ಸ್ಥಳೀಯ ಪೊಲೀಸ್ ಠಾಣೆ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದೊಂದಿಗೆ ನಿರಂತರ ಸಂಪರ್ಕ***ದಲ್ಲಿ ಇರುತ್ತೇವೆ.
11. ನಮ್ಮ ಶಾಲೆಯ/ಸಂಸ್ಥೆಯ ಕಟ್ಟಡ ಸರ್ವಋತು ಕಟ್ಟಡವಾಗಿದ್ದು, ***ಮಕ್ಕಳಿಗೆ ಅಗತ್ಯವಾದ ಗ್ರಂಥಾಲಯ, ಪ್ರಯೋಗಾಲಯ, ಕುಡಿಯುವ ನೀರಿನ ವ್ಯವಸ್ಥೆ, ಸುತ್ತುಗೋಡೆ ವ್ಯವಸ್ಥೆ, ಆಟದ ಮೈದಾನ, ಶೌಚಾಲಯ (ಹೆಣ್ಣುಮಕ್ಕಳಿಗೆ ಪ್ರತ್ಯೇಕ) ಇದೆ ಎಂಬುದನ್ನು ಖಾತ್ರಿಪಡಿಸುತ್ತೇವೆ*** ಮತ್ತು ಕಾಲಕಾಲಕ್ಕೆ ಅಗತ್ಯವಿದ್ದ ಕಡೆ ದುರಸ್ಥಿಗೊಳಿಸಿ ಅಭಿವೃದ್ಧಿಪಡಿಸುತ್ತೇವೆ.
12. ನಮ್ಮ ಶಾಲೆ/ಸಂಸ್ಥೆಯಲ್ಲಿ ಇರುವ ಮತ್ತು ಮುಂದೆ ದಾಖಲಾಗುವ ಅಂಗವಿಕಲ ಮಕ್ಕಳಿಗೆ ನಮ್ಮ ಶಾಲೆ/ಸಂಸ್ಥೆಯ ವಾತಾವರಣವು ಅಡೆತಡೆ ಮುಕ್ತವಾಗಿದ್ದ ***'ಅಂಗವಿಕಲ ಮಕ್ಕಳ ಸ್ನೇಹಿ'*** ಆಗಿರುವಂತೆ ನೋಡಿಕೊಳ್ಳುತ್ತೇವೆ.
13. ಮೇಲಿನ ಎಲ್ಲಾ ಅಂಶಗಳಿಗೆ ನಮ್ಮ ಶಾಲೆಯ/ಸಂಸ್ಥೆಯ ***ಪ್ರತಿಯೊಬ್ಬ ಮುಖ್ಯಸ್ಥರೂ, ಸಿಬ್ಬಂದಿ ಶಿಕ್ಷಕರೂ ಬದ್ಧರಾಗಿದ್ದಾರೆ.***
14. ನಮ್ಮ ಸಂಸ್ಥೆ/ಶಾಲೆ/ವಸತಿ ನಿಲಯದಲ್ಲಿ ಹಾಗೂ ನಮ್ಮ ಜೀವನದಲ್ಲಿ ಯಾವುದೇ ಮಕ್ಕಳ ಹಕ್ಕುಗಳ ಉಲ್ಲಂಘನೆ ಮಾಡುವುದಿಲ್ಲ. ಹಾಗೂ ಮಕ್ಕಳಿಗೆ ಸಂಬಂದಿಸಿದ ಎಲ್ಲಾ ಕಾನೂನುಗಳನ್ನು ಪರಿಪಾಲಿಸುತ್ತೇವೆ. ***ಒಂದು ವೇಳೆ ಉಲ್ಲಂಘನೆಯಾದಲ್ಲಿ ನಮ್ಮ/ನನ್ನ ಮೇಲೆ ಯಾವುದೇ ರೀತಿಯ ಕಾನೂನು ಕ್ರಮವನ್ನು ಕೈಗೊಳ್ಳಲು ಅಭ್ಯಂತರವಿರುವುದಿಲ್ಲ.***
15. ಸಮಾಜದ ಮತ್ತು ಪ್ರತಿಯೊಂದು ಕುಟುಂದ ಎಲ್ಲಾ ಮಕ್ಕಳನ್ನು ಸಮಾನತೆ ಮತ್ತು ಅವರ ಹಕ್ಕುಗಳ ಕಾಪಾಡುವ ಹಿತದೃಷ್ಠಿಯಿಂದಲೇ ಕಾರ್ಯನಿರ್ವಹಿಸುತ್ತೇನೆ ಹಾಗೂ ***ಮಕ್ಕಳ ಸಮಾನತೆ, ಸ್ವಾತಂತ್ರ್ಯ, ಸ್ವಾಭಿಮಾನ, ಗೌಪ್ಯತೆ ಮತ್ತು ಘನತೆಗೆ ಎಲ್ಲಿಯೂ ಚ್ಯುತಿಬಾರದಂತೆ ನೋಡೊಕೊಳ್ಳುತ್ತೇನೆ. ತನ್ಮೂಲಕ ನಮ್ಮ ಸಂಸ್ಥೆಯ ನೀತಿ/ನಿಯಮಗಳಿಗೆ ಬದ್ಧನಾಗಿ ಈ ಮೇಲಿನ ಬದ್ಧತೆಗೆ ಒಪ್ಪಿಕೊಂಡು ಬದ್ಧತಾ ಸ್ವಿಕಾರಮಾಡುತ್ತೇನೆ.***

**ವಸತಿ ನಿಲಯದಲ್ಲಿ /ಶಿಕ್ಷಣ ಸಂಸ್ಥೆಗಳ ನೌಕರರು ನೀಡಬೇಕಾಗಿರುವ *ಬದ್ಧತೆ:***

ನಾನು ಇದನ್ನು ಓದಿ, ಅರ್ಥಮಾಡಿಕೊಂಡು ಮತ್ತು ನೀತಿ ಸಂಹಿತೆಯಲ್ಲಿ ತಿಳಿಸಿರುವಂತೆ ಅನುಸರಿಸಲು ಒಪ್ಪಿರುತ್ತೇನೆ. ಮಕ್ಕಳ ರಕ್ಷಣೆ, ಸುರಕ್ಷತೆ ಮತ್ತು ಯೋಗಕ್ಷೇಮದ ಬಗ್ಗೆ ನನ್ನ ಬದ್ಧತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ನನಗೆ ಅರಿವಿರುತ್ತದೆ ಮತ್ತು ವಸತಿ ನಿಲಯದಲ್ಲಿ /ಶಿಕ್ಷಣ ಸಂಸ್ಥೆಯ ಒಳಗೆ ಮತ್ತು ಹೊರಗೆ ವೃತ್ತಿಪರ ನೈತಿಕತೆಗೆ ಬದ್ಧನಾಗಿರುತ್ತೇನೆ.

ನೌಕರನ ಹೆಸರು : ------------------------------------

ನೌಕರನ ಪದನಾಮ :------------------------------------

ನೌಕರನ ಸಹಿ :------------------------------------

ದಿನಾಂಕ :------------------------------------

ಸ್ಥಳ :------------------------------------